ಗಮನಕ್ಕೆ ತಂದಿದ್ದೇವೆ. ಅವರು ಇದರ ಪ್ರಸ್ತಾವನೆಯೇ ಸರ್ಕಾರದ ಮುಂದಿಲ್ಲ ಎಂದು ಹೇಳಿದರೆ ತಮ್ಮ ಆದೇಶವನ್ನು ಪಾಲಿಸುವಂತೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್.ರೋಶನ್ ಬೇಗ್:- ಮಾನ್ಯ ಸಭಾಧ್ಯಕ್ಷರೆ, ಮಾನ ಸದಸ್ಯರಾದ ಶ್ರೀ ಸಗೀರ್ ಅಹಮದ್ ಅವರು ಕೇಳಿರುವುದು ಔಟ್ ಪೋಸ್ಟ್. ನಾನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ಚಿಕ್ಕಮಗಳೂರು ಟೌನ್ ಪೋಲೀಸ್ ಸ್ಟೇಷನ್ ಇದೆ. ಬಸವನಹಳ್ಳಿ ಪೋಲೀಸ್ ಸ್ಟೇಷನ್ ಇದೆ, ರೂರಲ್ ಪೋಲೀಸ್ ಸ್ಟೇಷನ್ ಇದೆ. ಇದರ ಜೊತೆಗೆ ಅವರ ವಾದ ಏನು ಎಂದರೆ ಅಲ್ಲಿ 800 ಮನೆಗಳು ಇವೆ, ಅಲ್ಲಿ ಒಂದು ಪೋಲೀಸ್ ಸ್ಟೇಷನ್ ಬೇಕಾಗುತ್ತದೆ ಎಂದು ಹೇಳುತ್ತಿರುವುದು. There is a proposal before the Government to start a new police station called New Extension Police Station in Chickmagalur. ಆ ನ್ಯೂ ಪೋಲೀಸ್ ಸ್ಟೇಷನ್ ಲಿಮಿಟ್ಸ್‌ನಲ್ಲಿ ಈ 800 ಮನೆಗಳೆಲ್ಲಾ ಬರುತ್ತವೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

MR.SPEAKER:- Problem is solved.

ವಿಷಯ:- ವಿವಿಧ ಇಲಾಖೆಗಳ ನಡುವಣ ಸಮನ್ವಯದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 190 (738)

ಶ್ರೀ ಎನ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರದಲ್ಲಿ ನಗರಪಾಲಿಕೆ ದೂರ ಸಂಪರ್ಕ ಇಲಾಖೆ, ವಿದ್ಯುಚ್ಛಕ್ತಿ ಮಂಡಳಿ, ಜಲಮಂಡಳಿಗಳ ನಡುವೆ ಹೊಂದಾಣಿಕೆ ಇಲ್ಲದೆ, ನಗರದ ರಸ್ತೆಗಳು ಪಾದಚಾರಿ ಮಾರ್ಗಗಳು ಹದಗೆಟ್ಟ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಸ್ತೆಯನ್ನು ಕತ್ತರಿಸಿ ಸರಿಯಾಗಿ ಮುಚ್ಚದೆ ಇರುವುದರಿಂದ ವಾಹನಗಳು ಚಲಿಸಲು ಸಾಧ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಬಂದಿದೆ.

ಇ) ಬೆಂ.ಮ.ಪಾಲಿಕೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಕ.ವಿ.ಮಂಡಳಿ, ಜಲಮಂಡಳಿ,

ಟೆಲಿಕಾಂ, ಬೆಂ.ಅಭಿವೃದ್ಧಿ ಪ್ರಾಧಿಕಾರ ಹಾಗೂ ನಗರಸಭೆಗಳ ಪ್ರತಿನಿಧಿಗಳನ್ನು ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ 3 ತಿಂಗಳಿಗೊಮ್ಮೆ ಸಭೆ ಸೇರಿ ಅಗತ್ಯವಿರುವ ಕಡೆ ರಸ್ತೆಯನ್ನು ಅಗೆಯುವ ಬಗ್ಗೆ ತೀರ್ಮಾನ ಕೈಗೊಳ್ಳುವುದು.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಯಾವುದೇ ಹೊಂದಾಣಿಕೆ ಇಲ್ಲ. ಬಿಡಬ್ಲ್ಯುಎಸ್‌ಎಸ್‌ಬಿ, ಬಿಸಿಸಿ, ದೂರಸಂಪರ್ಕ, ಕೆಇಬಿ ಈ ಇಲಾಖೆಗಳ ನಡುವೆ ಹೊಂದಾಣಿಕೆ ಇಲ್ಲ ಎಂದು ಒಪ್ಪಿಕೊಂಡಿದ್ದಾರೆ. ಈ ರಸ್ತೆಯನ್ನು ಕಟ್ ಮಾಡಿ ಅದನ್ನು ಮುಚ್ಚದೇ ಇರುವುದರಿಂದ ಆಕ್ಸಿಡೆಂಟ್ಸ್ ಜಾಸ್ತಿ ಆಗುತ್ತಿದೆ ಎನ್ನುವುದನ್ನು ಕೂಡ ಒಪ್ಪಿಕೊಂಡಿದ್ದಾರೆ. ಕೈಗೊಳ್ಳಲಿರುವ ಕ್ರಮಗಳೇನು ಎಂದು ಕೇಳಿದರೆ 'ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಕ.ವಿ. ಮಂಡಳಿ, ಜಲಮಂಡಳಿ, ಟೆಲಿಕಾಂ, ಬಿಡಿಎ ಮತ್ತಿತರ ಪ್ರತಿನಿಧಿಗಳನ್ನೊಳಗೊಂಡಂತೆ ಸಮತಿ ರಚಿಸಲಾಗಿದೆ' ಎಂದು ಹೇಳಿದ್ದಾರೆ. ನನ್ನ ಉಪ ಪ್ರಶ್ನೆ ಈ ಕಮಿಟಿಯನ್ನು ರಚಿಸಿದ್ದು ಯಾವಾಗ? ಇದುವರೆಗೆ ಎಷ್ಟು ಸಲ ಸಭೆ ಸೇರಿದೆ ಈ ಸಮಿತಿ. ಬೆಂಗಳೂರಿನ ಇಲಾಖೆಗಳ ನಡುವೆ ಏನು ಹೊಂದಾಣಿಕೆಯ ಅಭಾವ ಇದೆಯೇ? ಇದನ್ನು ಪರಿಹಾರ ಮಾಡಲಿಕ್ಕೆ ಇದುವರೆಗೆ ಸಮಿತಿಯವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಅನಂತನಾಗ್:- ಮಾನ್ಯ ಅಧ್ಯಕ್ಷರೆ, ದಿನಾಂಕ 5.06. 1996ರಂದು ಈ ಸಮನ್ವಯ ಸಮಿತಿಯನ್ನು ನೇಮಿಸಲಾಗಿದೆ. ಇದರಲ್ಲಿ ಬೆಂಗಳೂರು ನಗರಪಾಲಿಕೆ, ದೂರ ಸಂಪರ್ಕ ಇಲಾಖೆ, ವಿದ್ಯುಚ್ಛಕ್ತಿ ಮಂಡಳಿ, ಜಲಮಂಡಳಿಗಳ ಸದಸ್ಯರು ಇರುತ್ತಾರೆ. ಇದಕ್ಕೆ ಛೇರ್ಮನ್ ಆಗಿ ಕಾರ್ಪೊರೇಷನ್ ಕಮೀಷನರ್ ಅವರನ್ನು ನೇಮಿಸಲಾಗಿದೆ. ಪ್ರತಿ ಮೂರು ತಿಂಗಳಿಗೊಮ್ಮೆ ಇವರು ಸಭೆ ಸೇರಿ ಬೆಂಗಳೂರಿನಲ್ಲಿ ಎಲ್ಲೆಲ್ಲಿ ರೋಡ್ ಕಟಿಂಗ್ಸ್ ಅಥವಾ ಅಗೆತ ಮಾಡಬೇಕು, ಅವುಗಳನ್ನು ಕುರಿತು ನಿರ್ಧಾರ ತೆಗೆದುಕೊಳ್ಳುತ್ತಾರೆ. ಇದುವರೆಗೆ ಏನೊಂದು ವ್ಯವಸ್ಥೆ ಇತ್ತು ಎಂದರೆ ಉದಾಹರಣೆಗೆ ಈ ದೂರಸಂಪರ್ಕ ಇಲಾಖೆಯವರು ಎಲ್ಲಾದರೂ ರೋಡ್ ಕಟಿಂಗ್ ಮಾಡಬೇಕಾದರೆ ಅದರ ಹಣವನ್ನು ಪಾವತಿ ಮಾಡುತ್ತಿದ್ದರು. ಅದನ್ನು ಹಾಗೆಯೇ ಬಿಟ್ಟು ಹೋಗುತ್ತಿದ್ದರು. ಅದರ ನಂತರ ಕಾರ್ಪೊರೇಷನ್ನಿನವರು ಎಂದಾದರೂ ಎತ್ತಿಕೊಳ್ಳಬೇಕಾಗಿತ್ತು. ಆದರೆ ಈಗೇನು ವ್ಯವಸ್ಥೆ ಮಾಡಲಾಗಿದೆ ಎಂದರೆ ಯಾವ ಇಲಾಖೆ ಅಥವಾ ಸಂಸ್ಥೆ ಈ ರೋಡ್ ಕಟಿಂಗ್ ಅಥವಾ ಅಗೆತವನ್ನು ಮಾಡುತ್ತಾರೆ, ತಕ್ಷಣ ಅವರು ಅದನ್ನು ಕಂಟ್ರಾಕ್ಟರ್ ಮೂಲಕ ಮುಚ್ಚಿಸಬೇಕು. ಮತ್ತು ಈ ಸಮನ್ವಯ ಸಮಿತಿಯ ಮೂಲಕ ಅದು ಕನ್‌ಫರ್ಮ್ ಆಗುವವರೆಗೂ ಬಿಲ್‌ಗಳನ್ನು ಪಾವತಿ ಮಾಡಬಾರದು ಎನ್ನುವ ಒಂದು ನಿರ್ಣಯವನ್ನು ಕೈಗೊಳ್ಳಲಾಗಿದೆ. ಆದ್ದರಿಂದ ಈ ಸಮಸ್ಯೆ ಬೆಂಗಳೂರಿನಲ್ಲಿ ಅಷ್ಟು ಇರಲಾರದು ಎನ್ನುವುದನ್ನು ತಮ್ಮ ಮೂಲಕ ಸದಸ್ಯರಿಗೆ ತಿಳಿಸಲು ಇಚ್ಛಿಪಡುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರಿನಲ್ಲಿ ರೋಡ್

ಕಟಿಂಗ್ ಏನು ಇದೆ, ಇದರಲ್ಲಿ ಎರಡು ವಿಧ ಇದೆ. ಒಂದು ನಿರೀಕ್ಷಿತ ರೋಡ್ ಕಟಿಂಗ್‌ಗಳು; ಅಂದರೆ ಅವರು ಮುಂಚೆಯೇ ತಿಳಿಸಿ, ಇಲ್ಲಿ ಕೇಬಲ್ ಹಾಕುತ್ತೇವೆ, ಲೈನ್ ಹಾಕುತ್ತೇವೆಂದು ತಿಳಿಸಿ ಮಾಡುವುದು. ಇನ್ನೊಂದು ತಕ್ಷಣ ಉದ್ಭವ ಆಗುವ ಅನಿರೀಕ್ಷಿತ ರೋಡ್ ಕಟಿಂಗ್‌ಗಳು. ಧಿಡೀರನೇ ಉದ್ಭವ ಆಗುವ ರೋಡ್ ಕಟಿಂಗ್‌ಗಳು. ಇವತ್ತು ನಾನು ಬೆಳಿಗ್ಗೆ ಮನೆಯಿಂದ ಹೊರಟಾಗ ರಸ್ತೆ ಇದ್ದ ಸ್ಥಿತಿ ವಾಪಸ್ ಹೋಗುವಾಗ ಇರುವುದಿಲ್ಲ. ರಸ್ತೆ ದೀಪ ಸಹ ಉರಿಯುತ್ತಿರುವುದಿಲ್ಲ. ಆ ಹಳ್ಳದಲ್ಲಿ ಬಿದ್ದಾಗ ಏನಾಗಬಹುದು. ಈ ಅನಿರೀಕ್ಷಿತ ರೋಡ್ ಕಟಿಂಗ್ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ? ಇದೊಂದು. ಎರಡನೆಯದು ಬೆಂಗಳೂರು ಸಿಟಿ ಕಾರ್ಪೊರೇಷನ್‌ನಲ್ಲಿ ಈ ರೋಡ್ ಕಟಿಂಗ್ ಅನ್ನುವುದು ಏನು ಇದೆ, ಇದು ಜೇಬ್ ಕಟಿಂಗ್ ಆಗಿಬಿಟ್ಟಿದೆ. ವರ್ಷಕ್ಕೆ ಕೋಟ್ಯಾಂತರ ರೂಪಾಯಿ ಹಣ ಕಲೆಕ್ಟ್ ಆಗುತ್ತದೆ. ಆ ಹಣ ಎಲ್ಲಿ ಹೋಗುತ್ತದೆ? ಯಾವ ರೋಡ್ ಕಟಿಂಗ್‌ಗೆ ಅವರು ಹಣವನ್ನು ತುಂಬಿದ್ದಾರೆ? ಎಂದು ಇದುವರೆಗೆ ಕೂಡ ಯಾರಿಗೂ ಗೊತ್ತಿಲ್ಲ. ಇದರ ಬಗ್ಗೆ ಏನಾದರೂ ಒಂದು ಸಮಗ್ರವಾದ ತನಿಖೆಯನ್ನು ತಾವು ಮಾಡಿಸುತ್ತೀರೋ? ಕೊನೆಗೆ ಬೆಂಗಳೂರಿನಲ್ಲಿ ವಾಟರ್ ಸಪ್ಲೈ, ಕೆಇಬಿ, ದೂರ ಸಂಪರ್ಕ ಇತ್ಯಾದಿ ಇಲಾಖೆಗಳು ನಾಗರೀಕನಿಗೆ ಅಂತೂ ಏನೂ ಸಹಾಯ ಮಾಡುವುದಿಲ್ಲ. ಟೆಲಿಫೋನ್ ರಿಪೇರಿ ಮಾಡುವುದಿಲ್ಲ, ಲೈಟ್ ಅನ್ನು ಉರಿಸುವುದಿಲ್ಲ. ಜೊತೆಗೆ ನಾಗರೀಕನ ಮೇಲೆ ಯುದ್ಧವನ್ನು ಸಾರಿದ್ದಾರೆಯೇ? ಈ ರೀತಿ ಇದ್ದಕ್ಕಿದ್ದ ಹಾಗೆ ಕಟ್ ಮಾಡಿ, ಒಂದು ಕೋಆರ್ಡಿನೇಷನ್ ಇಲ್ಲದೇ ಪರಸ್ಪರ ಸಂಬಂಧ ಇಲ್ಲ. ಯುದ್ಧವನ್ನು ಘೋಷಣೆ ಮಾಡಿದ್ದಾರೆಯೇ ಇದಕ್ಕೆ ಉತ್ತರ ಕೊಡಿ.

ಶ್ರೀ ಅನಂತನಾಗ್:- ಮಾನ್ಯ ಅಧ್ಯಕ್ಷರೇ, ಕೋಆರ್ಡಿನೇಷನ್ನಿನ ಕೊರತೆ ಇದೆ. ಅದನ್ನು ಸರಿಪಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು. ಇನ್ನು ತಕ್ಷಣ ಎಮರ್ಜೆನ್ಸಿ ಸಿಚುಯೇಷನ್ಸ್‌ನಲ್ಲಿ ರೋಡ್ ಕಟಿಂಗನ್ನು ಯಾವ ಸಂಸ್ಥೆ ಅಥವಾ ಯಾವ ಕಂಟ್ರಾಕ್ಟರ್ ಮಾಡುತ್ತಾರೋ ಅವರಿಂದಲೇ ತಕ್ಷಣ ಮುಚ್ಚುವ ವ್ಯವಸ್ಥೆಯನ್ನು ಇನ್ನು ಮುಂದೆ ಮಾಡುತ್ತೇವೆ. ಈ ಸಮನ್ವಯ ಸಮಿತಿಯ ಮೊದಲ ಮೀಟಿಂಗ್ 27ನೆಯ ತಾರೀಖಿಗೆ ಇಡಲಾಗಿದೆ. ಇನ್ನು ಮೇಲೆ ಏನು ತಾವು ತನಿಖೆ ಮಾಡಬೇಕೆಂದು ಹೇಳಿದ್ದೀರಿ, ತನಿಖೆ ಮಾಡಬೇಕಾದದ್ದು ಇಲ್ಲ. ಕೋಟ್ಯಾಂತರ ರೂಪಾಯಿ ಎಲ್ಲಿ ಖರ್ಚಾಗುತ್ತಿದೆ ಎನ್ನುವುದರ ಬಗ್ಗೆ ಈ ಸಂದರ್ಭದಲ್ಲಿ ಒಂದು ಡೀಟೇಲ್ ರಿಪೋರ್ಟ್ ತರಿಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಸಭಾಧ್ಯಕ್ಷರೇ, ಡಿಪಾರ್ಟ್‌ಮೆಂಟ್‌ನದ್ದು ದುಡ್ಡು ಕಲೆಕ್ಟ್ ಮಾಡುವುದು ಬೇರೆ. ಪ್ರತಿ ಮನೆಯವರು ಜಲಮಂಡಳಿಯಿಂದ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ, ಕೆಇಬಿ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ನೀವು ಕಾರ್ಪೊರೇಷನ್‌ನವರು ದುಡ್ಡು ತೆಗೆದುಕೊಳ್ಳುತ್ತಿದ್ದೀರಿ. ಆ ದುಡ್ಡನ್ನು ಆ ರೋಡ್

ಕಟಿಂಗ್ ಜಾಗಕ್ಕೆ ಮುಚ್ಚುವುದಕ್ಕೆ ಬಳಸುವುದಿಲ್ಲ. ಅದು ಬೇರೆ ಎಲ್ಲೋ ಅಪವ್ಯಯ ಆಗುತ್ತಿದೆ. ಅದರ ಬಗ್ಗೆ ನಾನು ಕೇಳುತ್ತಿರುವುದು. ನಾಗರೀಕನ ಜೇಬು ಕಟ್ ಮಾಡುತ್ತಿದ್ದಾರೆಯೇ ಹೊರತು, ನಗರದ ರೋಡ್ ಕಟ್ ಆಗುತ್ತಿರುವುದನ್ನು ಮುಚ್ಚುತ್ತಿಲ್ಲ. ಹೊಂಡಗಳಾಗಿ ಇವತ್ತು ಬಹಳ ಅಸಹನೀಯ ಸ್ಥಿತಿಯಲ್ಲಿ ನಾಗರೀಕ ಇದ್ದಾನೆ. ಅದರ ಬಗ್ಗೆ ನಾನು ಕೇಳುತ್ತಾ ಇರುವುದು.

ಶ್ರೀ ಅನಂತನಾಗ್:- ಮಾನ್ಯ ಅಧ್ಯಕ್ಷರೇ ಈ ಸಮನ್ವಯ ಸಮಿತಿಯ ಉದ್ದೇಶವೇ ಅದು. ಎಲ್ಲಿ ರೋಡ್ ಅಗೆಯಲಾಗುತ್ತದೆ ಅಥವಾ ರೋಡ್ ಕಟಿಂಗ್ ಮಾಡಲಾಗುತ್ತದೆ. ಅಲ್ಲಿ ಆ ಕಂಟ್ರಾಕ್ಟರ್ ತಕ್ಷಣವೇ ಆ ಅಗೆತವನ್ನು ಮುಚ್ಚಬೇಕು ಎನ್ನುವ ಒಂದು ವ್ಯವಸ್ಥೆಯನ್ನು ಈಗ ಹೊಸದಾಗಿ ತಂದಿರುವುದರಿಂದ ಈ ತರಹದ ಅಪವ್ಯಯ ಆಗಲೀ ಅಥವಾ ಕೆಲಸ ಹಾಗೆಯೇ ಬಾಕಿ ಉಳಿಯುವುದಾಗಲೀ ಇನ್ನು ಮೇಲೆ ಆಗುವುದಿಲ್ಲ ಎನ್ನುವ ಆಶ್ವಾಸನೆಯನ್ನು ತಮ್ಮ ಮೂಲಕ ಸದಸ್ಯರಿಗೆ ನೀಡಲಿಚ್ಛಿಸುತ್ತೇನೆ.

ಶ್ರೀ ಬಿ.ಮುನಿಯಪ್ಪ:- ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಕೆಇಬಿಯವರೋ ಅಥವಾ ಜಲಮಂಡಲಿಯವರೋ ಮತ್ತೊಬ್ಬರೋ ಮಗದೊಬ್ಬರೋ ರೋಡ್ ಕಟಿಂಗ್ ಮಾಡಿದರೆ ಮೊದಲು ದುಡ್ಡು ಕೊಡುವ ವ್ಯವಸ್ಥೆ ಇರಲಿಲ್ಲ ಎಂದು ಹೇಳಿದರು. ಅದು ತಪ್ಪು. ವ್ಯವಸ್ಥೆ ಇದೆ. ರೋಡ್ ಕಟಿಂಗ್ ಛಾರ್ಜ್‌ಗೆ ಅವರು ದುಡ್ಡು ಕಾರ್ಪೊರೇಷನ್‌ಗೆ ಕಟ್ಟುತ್ತಾರೆ. ಆದರೆ ಇರುವ ಸಮಸ್ಯೆ ಏನು ಎಂದರೆ, ಇವತ್ತು ನಾವೊಂದು ಬೀದಿಗೆ ಟಾರ್ ಹಾಕುತ್ತೇವೆ. ಟಾರ್ ಹಾಕಿದ ಎಂಟು ದಿವಸಕ್ಕೆ ಮತ್ತೆ ಆ ರೋಡ್ ಕಟಿಂಗ್ ಮಾಡುತ್ತಾರೆ. ಮಾಡಿದಾಗ ಏನಾಗುತ್ತದೆ ಎಂದರೆ ಆ ರೋಡ್ ಎಷ್ಟೇ ಅಂದವಾಗಿ ಟಾರ್ ಹಾಕಿದರೂ ಸಹ ಆ ರೋಡ್ ಹದಗೆಡುತ್ತದೆ. ಆ ಪರಿಸ್ಥಿತಿ ಬದಲಾವಣೆ ಆಗಬೇಕು. ಮಂತ್ರಿಗಳು ಈ ಮೂರ್ನಾಲ್ಕು ಇಲಾಖೆಗಳನ್ನು ಸೇರಿಸಿ ಮೂರು ತಿಂಗಳಿಗೆ ಒಂದು ಸಾರಿ ಸಭೆ ಸೇರುತ್ತದೆ ಎಂದು ಹೇಳುತ್ತಾರೆ. ಹಾಗಾದರೆ ಇನ್ನು ಮೇಲೆ ಬೆಂಗಳೂರಿನಲ್ಲಿ ಯಾವುದಾದರೂ ಒಂದು ರಸ್ತೆಗೆ ಟಾರ್ ಹಾಕಿದರೆ ಈ ಮೂರು ತಿಂಗಳಿಗೆ ಒಮ್ಮೆ ಈ ಸಭೆ ಸೇರಿ ಇವರ ಅನುಮತಿ ಪಡೆಯದೇ ಬೆಂಗಳೂರಿನಲ್ಲಿ ಯಾವುದೇ ರೋಡ್ ಕಟಿಂಗ್ ಆಗುವುದಿಲ್ಲವೇ ಎಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಅನಂತನಾಗ್:- ಇದರಲ್ಲಿ ನಿರ್ಣಯ ತೆಗೆದುಕೊಂಡಂತೆ ಎಲ್ಲಿ ರೋಡ್ ಕಟಿಂಗ್ ಆಗುತ್ತದೆ, ಅದನ್ನು ಮುಚ್ಚುವುದು ಮಾತ್ರವಲ್ಲ, ಮೆಟಲಿಂಗ್ ಮತ್ತು ಅಸ್ಫಾಲ್ಟಿಂಗ್ ಕೂಡ ತಕ್ಷಣವೇ ಅಲ್ಲಿ ಮಾಡಬೇಕು ಎನ್ನುವ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಬಿ.ಮುನಿಯಪ್ಪ:- ಬೆಂಗಳೂರಿನಲ್ಲಿ ಇವತ್ತು ಎಲ್ಲೂ ದೂರ ಬೇಕಾಗಿಲ್ಲ. ಟಾರಿನ ಅಭಾವ ಏನಾದರೂ ಇದೆಯಾ ಎಂದು ನಾನು ಮಂತ್ರಿಗಳನ್ನು ಕೇಳುತ್ತಿದ್ದೇನೆ. ಹೈಕೋರ್ಟ್ ಪಕ್ಕದಲ್ಲಿ ಹಾಗೂ ಬೆಂಗಳೂರಿನ ನಾನಾ ಭಾಗಗಳಲ್ಲಿ ವಾಟ್ ಹೋಲ್ಸ್ ಆಗಿದ್ದರೆ ಕೆಮ್ಮಣ್ಣನ್ನು ತಂದು ಮುಚ್ಚುತ್ತಿದ್ದಾರೆ. ಅದನ್ನು ನೋಡಬಹುದು. ಹೈಕೋರ್ಟ್ ಮುಂದೇನೇ ಇದೆ ಅದು. ಈ ತರಹ ಬೆಂಗಳೂರಿನ ನಾನಾ ಭಾಗಗಳಲ್ಲಿದೆ.

ಬೆಂಗಳೂರಿನಲ್ಲಿ ಏನಾದರೂ ಟಾರಿನ ಅಭಾವ ಇದೆಯಾ? ಅಥವಾ ಏನು? ಕೆಮ್ಮಣ್ಣು ಮುಚ್ಚುವುದಕ್ಕೆ ಕಾರಣ ಏನು ದಯವಿಟ್ಟು ಮಂತ್ರಿಗಳು ಹೇಳಬೇಕು.

ಅಧ್ಯಕ್ಷರು:- ಮಾನ್ಯ ಸದಸ್ಯರು ಟಾರಿನ ಅಭಾವ ಇದೆಯಾ ಎಂದು ಕೇಳುತ್ತಿದ್ದಾರೆ.

ಶ್ರೀ ಅನಂತನಾಗ್:- ಟಾರಿನ ಅಭಾವ ಇಲ್ಲ. ಅಲ್ಲಿ ಕೆಲವು ಕೆಲಸಗಳನ್ನು ಮಾಡುವಾಗ ಸ್ವಲ್ಪ ಡೆಬರಿಯನ್ನು ತಂದು ಹಾಕುತ್ತಾರೆ ಅನೇಕ ಕಡೆ ಆನ್ ಆಥರೈಸ್ಡ್ ಆಗಿ ಡಂಪ್ ಮಾಡಿದ್ದರು. ಅದನ್ನು ತೆಗೆಸಲಾಗಿದೆ. ಆದ್ದರಿಂದ ಮಣ್ಣನ್ನು ಸಂಪೂರ್ಣವಾಗಿ ತೆಗೆದನಂತರ ಟಾರ್ ಹಾಕಿ ಸರಿಪಡಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈ ವಿದ್ಯುಚ್ಛಕ್ತಿ ಮಂಡಲಿ, ಜಲಮಂಡಲಿ, ಬೆಂಗಳೂರು ನಗರಸಭೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಇವರದು ಎಷ್ಟೇ ಹೊಂದಾಣಿಕೆ ಇದೆ ಎಂದರೂ ಹೊಂದಾಣಿಕೆ ಇಲ್ಲ. ಇವರು ಒಂದೊಂದು ಕಡೆ ರಸ್ತೆಗಳನ್ನು ಅಗೆದರೆ, ಇದರ ಜೊತೆಗೆ ಕೇಂದ್ರದ್ದು, ಈ ದೂರವಾಣಿ ಇಲಾಖೆಯವರು. ಒಂದೊಂದು ಸಾರಿ ರಸ್ತೆ ಅಗೆದರೆ ತಿಂಗಳು ಎರಡು ತಿಂಗಳುಗಟ್ಟಲೆ ಆ ರಸ್ತೆಯನ್ನು ಹಾಗೆಯೇ ಬಿಡುತ್ತಿದ್ದರು. ಹಿಂದೆ ತಮಗೆ ಗೊತ್ತಿರಬೇಕು. ಎಸ್.ಎಂ.ಸಾಗರ್ ಎಂದು ಹೇಳಿ ದೊಡ್ಡ ಫೋಟೋಗ್ರಾಫರ್. ಅವರ ಮಗ ಈ ತರಹ ರಸ್ತೆ ದುರಂತದಲ್ಲಿ ಸತ್ತಿದ್ದು. ಮತ್ತು ಜಯತೀರ್ಥರಾವ್ ಎಂದು ಒಬ್ಬ ದೊಡ್ಡ ಹಿರಿಯ ಪತ್ರಕರ್ತರು ಇದೇ ರೀತಿ ರಸ್ತೆ ಅಪಘಾತದಲ್ಲಿ ಸತ್ತಿರತಕ್ಕದ್ದು. ಇದರ ಬಗ್ಗೆ ಅವರಿಗೆ ಪರಿಹಾರವನ್ನು ಕೂಡ ಯಾರೂ ಕೊಡುವುದಕ್ಕೆ ತಯಾರಿಲ್ಲ. ಇವರು ವಿದ್ಯುಚ್ಛಕ್ತಿ ಮಂಡಲಿಯಾಗಲೀ, ಅಥವಾ ದೂರವಾಣಿ ಆಗಲೀ ನಗರಸಭೆಯಾಗಲೀ ಯಾರೂ ಕೊಡುವುದಕ್ಕೆ ಆಗಲಿಲ್ಲ. ಇವು ಬೆಂಗಳೂರು ನಗರದ ಯಮಲೋಕಗಳು ಆಗಿವೆ ಈ ರಸ್ತೆಯನ್ನು ಅಗೆಯತಕ್ಕದ್ದು ಯಮಲೋಕವೇ ಹೊರತು ಇವು ಜನರಿಗೆ ವರವಾಗಬೇಕಾಗಿರತಕ್ಕದ್ದು ಶಾಪವಾಗಿ ಪರಿಣಮಿಸಿದೆ. ಆದ್ದರಿಂದ ಇವರು ಮೂರು ತಿಂಗಳಿಗೊಮ್ಮೆ ಸಮನ್ವಯ ಸಮಿತಿ ಸಭೆ ಸೇರಿ ಮಾಡುತ್ತೇವೆ ಎನ್ನುವುದಲ್ಲ. ಕಾಯಿದೆಯನ್ನೇ ಬದಲಾವಣೆ ಮಾಡಬೇಕು ಯಾರು ಇದಕ್ಕೆ ಸಂಬಂಧಪಟ್ಟಿರತಕ್ಕವರು, ಅವರಿಗೆ ಏನಾದಾರೂ ಆಗತಕ್ಕದ್ದು ಜವಾಬ್ದಾರಿ ಸರ್ಕಾರದ ಮೇಲೆ, ನೇರ ಜವಾಬ್ದಾರಿ ಸರ್ಕಾರ ವಹಿಸಿಕೊಳ್ಳಬೇಕು. ಅದರ ಬಗ್ಗೆ ಸರ್ಕಾರ ತೀವ್ರವಾಗಿ ಎಷ್ಟು ದಿವಸದೊಳಗಾಗಿ ಇದನ್ನು ಮುಚ್ಚಬೇಕು ಎನ್ನತಕ್ಕ ನಿರ್ಧಾರವನ್ನು ಕೈಗೊಳ್ಳತಕ್ಕದ್ದು ಯಾವಾಗ ಎನ್ನತಕ್ಕದ್ದನ್ನು ತಾವು ಹೇಳಬೇಕು.

ಶ್ರೀ ಅನಂತ ನಾಗ್:- ಮಾನ್ಯ ಅಧ್ಯಕ್ಷರೇ, ಈ ಬರೇ ರೋಡ್ ಕಟಿಂಗ್ಸ್ ಇದ್ದರೆ ಅದು ಬಹಳ ಬೇಗ ಮುಚ್ಚಬಹುದು. ಆದರೆ ಕೇಬಲ್ಸ್ ಲೇ ಮಾಡುವುದಕ್ಕೆ, ಅಂತಹದಕ್ಕೆ ಸ್ವಲ್ಪ ದಿವಸಗಳೇ ಹಿಡಿಯುತ್ತವೆ. ಆದರೆ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಅದನ್ನು ಗಂಭೀರವಾಗಿ ಪರಿಗಣಿಸಿ, ಅದರ ಮೇಲೆ ಪರಿಶೀಲನೆ ಮಾಡುತ್ತೇವೆ ಎನ್ನುವುದನ್ನು ತಮ್ಮ ಮೂಲಕ ತಿಳಿಸುತ್ತೇನೆ.